ಶ್ರೀ ಬೀಮಣ್ಣ ಖಂಡ್ರೆ:- ಸಮಾಧಾನದಿಂದ ಕೇಳಿ. ನಾವು ಏನು ಹೇಳಬೇಕೋ ಹೇಳುತ್ತೇವೆ. ದಯವಿಟ್ಟು ನಿಮ್ಮ ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ವಿರೋಧಪಕ್ಷದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಸರ್ಕಾರ ಜನವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಯಾದ ಮೇಲೆ ರಾಜ್ಯಕ್ಕೆ ಏನಾದರೂ ಒಳ್ಳೆಯದಾಗಬಹುದೆಂದು ನಾವು ತಿಳಿದಿದ್ದೆವು. ಅದು ಒಂದು ಕೆಟ್ಟ ಕನಸು. ಇವರು ಈ ರಾಜ್ಯದ ಜನತೆಗೆ ಮಾಡಿರತಕ್ಕ ಮಹಾ ಮೋಸ. ಈ ಮೋಸವನ್ನು ನಾವು ವಿಧಿಯಿಲ್ಲದೆ ಖಂಡಿಸಲೇಬೇಕಾಗಿದೆ. ಇದು ಸರ್ಕಾರ ಹೊರಡಿಸಿರತಕ್ಕ ದರ ಏರಿಕೆ ಪಟ್ಟಿ. ಈ ಪಟ್ಟಿಯನ್ನು ನಾವು ತೀವ್ರವಾಗಿ ವಿರೋಧಿಸುತ್ತಿದ್ದೇವೆ. ನಾಜ್ಯಾದ್ಯಂತ ಜನತೆಯಲ್ಲಿ ಈ ಮಹಾ ಸಭೆಯು ಮೋಕ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇವೆ. ಇಡೀ ರಾಜ್ಯದ ಸಮಗ್ರ ವಿರೋಧಪಕ್ಷಗಳು, ಸಂಘ ಸಂಸ್ಥೆಗಳವರು ಈ ಸರ್ಕಾರದ ಬೆಲೆಯ ಏರಿಕೆಯ, ದರ ಏರಿಕೆಯ ನೀತಿಯನ್ನು ವಿರೋಧಿಸಿ ರಸ್ತೆ, ರಸ್ತೆಗಳಲ್ಲಿ, ಬೀದಿ ಬೀದಿಗಳಲ್ಲಿ ಈ ಸರ್ಕಾರದ ವಿರುದ್ಧ ಚಳುವಳಿಯನ್ನು ಪ್ರಜಾಸತ್ತಾತ್ಮಕವಾಗಿ ನಡೆಸಬೇಕೆಂದು ಹೇಳಿ, ಒತ್ತಾಯ ಮಾಡಿ, ಆ ಚಳುವಳಿಯನ್ನು ಇಲ್ಲಿಂದಲೇ ಧರಣಿ ಮಾಡುವ ಮೂಲಕ ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ಅವರು ಮಾಡುತ್ತಿರುವುದು ಅನ್ಯಾಯವೆಂದು ಹೇಳಿ ದೊಡ್ಡ ಆಪರೇಷನ್ ಮಾಡುತ್ತೇವೆಂದು ಹೇಳಿ, ಇಡೀ ರಾಜ್ಯದ ಜನತೆಯ ಜೋಬಿಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಆಪರೇಷನ್ ಮಾಡುತ್ತಿದ್ದಾರೆ; ಇಡೀ ರಾಜ್ಯದ ಜನತೆಯ ಪರವಾಗಿ ಇದನ್ನು ಪ್ರತಿಭಟನೆ ಮಾಡಿ, ನಾವು ಕೂಡ ಇದನ್ನು ವಿರೋಧ ಮಾಡುತ್ತಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ:- ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ಇದೇ ಫೆಬ್ರವರಿ ೨೪ರಿಂದ ಗ್ರಾಮೀಣ ಸಾಮಾನ್ಯಜನರ ಮತ್ತು ನಗರ ಬಸ್ ದರವನ್ನು ಶೇಕಡಾ ೨೨ ರಷ್ಟು ಮತ್ತು ಎಕ್ಸ್‌ಪ್ರೆಸ್, ಸೆಮಿಲೆಕ್ಷರಿ ಬಸ್ ದರಗಳನ್ನು ಶೇಕಡಾ ೨೫ರಷ್ಟು ಹೆಚ್ಚಿಸಿದೆ. ಈಗ ಗ್ರಾಮೀಣ ಸಾಮಾನ್ಯ ಮತ್ತು ಎಕ್ಸ್‌ಪ್ರೆಸ್ ಬಸ್ ದರಗಳನ್ನು ಶೇಕಡ ೭ ರಷ್ಟು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿದೆ. ಅದರಂತೆ ೩೦೦ ಕಿಲೋಮೀಟರ್‌ಗಳಿಗಿಂತ ಹೆಚ್ಚು ದೂರದ ಲಕ್ಷುರಿ ಬಸ್‌ಗಳಿಗೆ ಇವತ್ತು ಕೂಡ ಶೇಕಡ ೭ರಷ್ಟು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿದೆ.

(ಗೊಂದಲ)

(ಈ ಸಂದರ್ಭದಲ್ಲಿ ವೆಲ್‌ನಲ್ಲಿ ನಿಂತ ಮಾನ್ಯ ವಿರೋಧಪಕ್ಷದ ಸದಸ್ಯರು ಜನವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ೧೭ ಪರ್ಸೆಂಟ್, ೨೫ ಪರ್ಸೆಂಟ್ ಹಾಕಿ ಏರಿಸಿದಾಗ ತಾವು ರಾಜೀನಾಮೆ ಕೊಟ್ಟಿದ್ದಿರಾ ಸುಮ್ಮನೆ ಏನು ಮಾತನಾಡುತ್ತಿದ್ದೀರಿ. ಏತಕ್ಕೆ ರಾಜೀನಾಮೆಯನ್ನು ಕೊಡಬೇಕು. ದರವನ್ನು ಕಡಿಮೆ ಮಾಡಿದ್ದಕ್ಕೆ ರಾಜೀನಾಮೆಯನ್ನು ಕೊಡಬೇಕೆ. ಏನು ಮಾತನಾಡುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಬೆಲೆ ಏರಿಸಿದ್ದಾರೆಂದು ನೀವು ಏರಿಸುತ್ತೀರಾ?

ಶ್ರೀ ಎಂ. ವೀರಪ್ಪಮೊಯಿಲಿ:- ಹೌದು ಹೌದು, ನೀವು ಬರೆ ನೀರನ್ನು ಕುಡಿದು ಸರ್ಕಾರ ನಡೆಸಿದ್ದೀರಿ, ಏನು ಮಾತನಾಡುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಅನ್ಯಾಯ ಮಾಡಿದ್ದರಿಂದ ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ.